# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು–48.

ಸಂ:ಬಿಬಿಎಂಪಿ/ಸಕಾಅ/ಹೂಉವಿ/39 /2020–21 ದಿನಾಂಕ:24.12.2021

**-:ದಿನಾಂಕ:24.12.2021 ರಂದು ನಡೆದ 54-ಹೂಡಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-**

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21–09–2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:24.12.2021 ರ ಶುಕ್ರವಾರ ಮಧ್ಯಾಹ್ನ 3.00 ಕ್ಕೆ ವಾರ್ಡ್ ನಂ.54–ಹೂಡಿ ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳೂ ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:–**

| ಕ್ರ.ಸಂ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀ.ಕುಬೇರಪ್ಪ. ಕೆ | ಅಧ್ಯಕ್ಷರು ವಾರ್ಡ್ ನೋಡಲ್ ಅಧಿಕಾರಿಗಳು ಹಾಗೂ ಸ.ಕಾ.ಅ. ಹೂಡಿ ಉಪವಿಭಾಗ | ಹಾಜರಿದ್ದರು. |
| 2. | ಶ್ರೀ.ಶೇಖ್ ಮೊಹಿದ್ದೀನ್ | ಕಾರ್ಯದರ್ಶಿಗಳು ವಾರ್ಡ್ ಎ.ಇ. ವಾರ್ಡ್.ನಂ-54 | ಹಾಜರಿದ್ದರು. |
| 3. | ಶ್ರೀ.ವೀರಪ್ಪ | ಕಿರಿಯ ಆರೋಗ್ಯ ನೀರಿಕ್ಷಕರು, ವಾರ್ಡ್ ನಂ-54 | ಹಾಜರಿದ್ದರು. |
| 4. | ಶ್ರೀ. ಚಂದ್ರಪ್ಪ.ಬಿ | ಕಿರಿಯ ಆರೋಗ್ಯ ನೀರಿಕ್ಷಕರು ಭೈರತಿ ಹೂಡಿ-54 | ಹಾಜರಿದ್ದರು. |
| 5. | ಶ್ರೀ. ಕೌಶಿಕ್ | ಮಾರ್ಷಲ್ ಹೂಡಿ | ಹಾಜರಿದ್ದರು. |
| 6. | ಶ್ರೀಮತಿ.ನರಸಮ್ಮ | SWM Sup. | ಹಾಜರಿದ್ದರು. |
| 7. | ಶ್ರೀ.ಅಶ್ವತ್ಥ್ ನಾರಾಯಣ | ಎಸ್.ವಿ.ಐ | ಹಾಜರಿದ್ದರು. |
| 8. | ಶ್ರೀಮತಿ.ಅನಿತಾ | SWM Sup. | ಹಾಜರಿದ್ದರು. |
| 9. | ಶ್ರೀ.ಗುರಪ್ಪ | ಅಯ್ಯಪ್ಪನಗರ ಸೂಪರ್‌ವೈಜರ್ | ಹಾಜರಿದ್ದರು. |
| 10. | ಶ್ರೀ.ಶಿವರಾಜ್ | Street Light | ಹಾಜರಿದ್ದರು. |

**ಸಭೆಯ ನಡುವಳಿಗಳು:-**

- ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ–54 ರವರು ಸಭೆಗೆ ಬಂದಿರುವ ವಾರ್ಡ್ ಸದಸ್ಯರಿಗೆ, ಅಧಿಕಾರಿ/ನೌಕರರುಗಳಿಗೆ ಸ್ವಾಗತಾ ಕೋರಿ ಸಭೆ ನಡೆಸಿಕೊಡುವಂತೆ ಕೊರಿದರು.
- ಅಧ್ಯಕ್ಷರು ಈ ಹಿಂದೆ ನಡೆದ ವಾರ್ಡ್ ಸಮಿತಿ ಸಭೆಯಲ್ಲಿ ತಿರ್ಮಾನಗಳನ್ನು ಕೈಗೊಂಡಿರುವ ಬಗ್ಗೆ ಅಧಿಕಾರಿ/ನೌಕರರು ಚರ್ಚಿಸಲಾಯಿತ್ತು ಹಾಗೂ ಕ್ರಮವಹಿಸಲು ಸೂಚಿಸಲಾಯಿತ್ತು.

**I.ಘನತ್ಯಾಜ್ಯ ನಿರ್ವಹಣೆಯ ಬಗ್ಗೆ:-**

1) ಅರುಣಾರೆಡ್ಡಿ ಆರ್.ಡಬ್ಲ್ಯೂ.ಎ. ರವರು ಭೈರತಿ, ಚಿಕ್ಕಬೈರತಿ ಕಡೆಗಳಲ್ಲಿ ಬ್ಲಾಕ್‌ಸ್ಪಾಟ್‌ಗಳು ಹೆಚ್ಚಾಗಿರುತ್ತದೆ ಎಂದು ತಿಳಿಸಿದರು.
2) ಹಿರಿಯ ಆರೋಗ್ಯ ಪರಿವೀಕ್ಷಕರು ರವರು ಪೌರಕಾರ್ಮಿಕರಗೆ ವಿಶಾಂತ್ರಿ ಗೃಹ ನಿರ್ಮಿಸಲು ಸರ್ಕಾರಿ ಜಾಗವನ್ನು ಗುರುತಿಸಿ ಕೊಡಲು ತಿಳಿಸಿದರು.
3) ಮಳೆಗಾಲ ಇರುವುದರಿಂದ ಕಾಲಮಿತಿಯೊಳಗೆ ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲಾ ಪ್ರದೇಶಗಳಲ್ಲಿ ಸೊಳ್ಳೆ ನಿಯಂತ್ರಣ ಔಷಧಿ ಸಿಂಪಡಿಸಲು ಹಾಗೂ ಕಾಲಕಾಲಕ್ಕೆ Fogging ಮಾಡಲು ಅಧ್ಯಕ್ಷರು ತಿಳಿಸಿದರು.

**ಕ್ರಂ.ಸಂ 1ರಿಂದ 3ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸ.ಕ.ಅ. ಎಸ್.ಡಬ್ಲ್ಯೂ.ಎಂ/ಹಿ.ಆ.ಪ/ಕಿ.ಆ.ಪ)**

**II. ಬಿ.ಡಬ್ಲ್ಯೂ.ಎಸ್,ಎಸ್.ಬಿ(BWSSB):-**

1) ತಿಗಳರಪಾಳ್ಯದಲ್ಲಿ ಕಾವೇರಿ ನೀರನ್ನು ಸರಿಯಾಗಿ ಬಿಡದೆ ಹಾಗೂ ಸರಿಯಾಗಿ ಸಮಯಕ್ಕೆ ಬರದೆ ಬಹಳ ನೀರಿನ ಸಮಸ್ಯೆ ಇರುವುದರಿಂದ ವಾರ್ಡ್ ಸಮಿತಿ ಸಭೆಯಲ್ಲಿ ತಿಳಿಸಲಾಯಿತು. ಹಾಗೂ ಅಧ್ಯಕ್ಷರು ಬಿ,ಡಬ್ಲ್ಯೂ.ಎಸ್.ಎಸ್,ಬಿ ಹಾಗೂ ಸಂಬಂಧಪಟ್ಟ ಅಧಿಕಾರಿಯವರಿಗೆ ತಿಳಿಸಿದರು.
2) ಪ್ರಸಾದ್ ಆರ್.ಡಬ್ಲ್ಯೂ.ಎ. ರವರು ಕೊಡಿಗೇಹಳ್ಳಿ ಮುಖ್ಯರಸ್ತೆಯ ದಿಯಾ ಅಕಾಡಯಿ, ಕಾಸಾ ಗ್ರಾಂಡ್ ಹಾಗೂ ಓಂ ರೆಸಿಡೆನ್ಸಿ ಈ ಮೂರು ಜಾಗಗಳಲ್ಲಿ ನೀರು ರಸ್ತೆಮೇಲೆ ಹರಿಯುತ್ತಿದ್ದು ಇದನ್ನು ದುರಸ್ಥಿ ಸರಿಪಡಿಸಲು ತಿಳಿಸಿದರು.

**ಕ್ರಂ.ಸಂ 1ರಿಂದ 2 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸ.ಕಾ.ಅ./ಸ.ಅ/ಬಿ.ಡಬ್ಲ್ಯೂ.ಎಸ್,ಎಸ್.ಬಿ.**

**ಕಾಮಗಾರಿ ಇಲಾಖೆ**

1) ವಾರ್ಡ್ ವ್ಯಾಪ್ತಿಯಲ್ಲಿನ ಗ್ರಾಮಗಳಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಲು ಮತ್ತು ಟೆಂಡರ್ ಪ್ರಕ್ರಿಯೆ ಆರಂಭಗೊಂಡಿರುವ ಎಲ್ಲಾ ಕಾಮಗಾರಿಗಳನ್ನು ಬೇಗ ಪ್ರಾರಂಭಿಸಿ ಕೆಲಸ ಮಾಡಲು ತಿಳಿಸಿದರು.
2) ಪಾಟ್‌ಹೋಲ್ ಕಾರ್ಯಕ್ರಮವನ್ನು ವಾರ್ಡ್ ವ್ಯಾಪ್ತಿಯಲ್ಲಿ ತುರ್ತಾಗಿ ಕ್ರಮ ವಹಿಸಲು ತಿಳಿಸಿದರು.
3) ಗುಬ್ಬಿ ಕ್ರಾಸ್ ಮುಖ್ಯ ರಸ್ತೆಯ ಬೈಬಲ್ ಕಾಲೇಜ್ ರಸ್ತೆಯಿಂದ ಹೋಲಿ ಕ್ರಿಸ್ಟ್ ಶಾಲೆಯಿಂದ ಪೂರ್ಣ ಪ್ರಜ್ಞಾ ಶಾಲೆಯವರೆಗೆ ರಸ್ತೆಯ ಎಡಭಾಗದಲ್ಲಿ ಮುಖ್ಯರಸ್ತೆಯಲ್ಲಿ ಅತಿಯಾದ ನೀರು ನಿಂತಿದ್ದು ಮಳೆಯ ಸಂದರ್ಭದಲ್ಲಿ ನೀರು ರಸ್ತೆಯು ತುಂಬಿ ನಿಂತು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರುತ್ತದೆ ಇದನ್ನು ಸರಿಪಡಿಸಲು ತಿಳಿಸಿದರು ಮತ್ತು ವಾರ್ಡಿನ ಮೇಜರ್ ರೋಡ್‌ಗೆ ಸಂಬಂಧಿಸಿದಂತೆ ರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚಲು ತುರ್ತಾಗಿ ಕ್ರಮವಹಿಸಲು ತಿಳಿಸಿದರು.

**ಕ್ರಂ.ಸಂ 1ರಿಂದ 3 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸಕಾಅ/ಸಅ/ಬಿಬಿಎಂಪಿ.**

**ಬೀದಿ ದೀಪ**

1) ಪ್ರಸಾದ್ ಆರ್.ಡಬ್ಲ್ಯೂ.ಎ. ಕೊಡಿಗೇಹಳ್ಳಿ ರವರು ಕೊಡಿಗೇಹಳ್ಳಿ ಗ್ರಾಮದಲ್ಲಿ ಇಸ್ಮಾಯಿಲ್ ಅವರ ಮನೆ ಪಕ್ಕದಲ್ಲಿರುವ ವಿದ್ಯುತ್ ಕಂಬ ಹಾಳಾಗಿದ್ದು ಅತಿ ಜರೂರಾಗಿ ಸರಿಪಡಿಸಲು ತಿಳಿಸಿದರು.
2) ಬೆಸ್ಕಾಂ ರವರು ಮಳೆ ಅತಿಯಾಗಿರುವುದರಿಂದ ರಸ್ತೆಗಳಲ್ಲಿ ಅಗೆದಿರುವ ಜಾಗಗಳಲ್ಲಿ ರಿಸ್ಟೋರ್ ಮಾಡಲು ತಿಳಿಸಿದರು. ಬೆಸ್ಕಾಂನಿಂದ ಮರಗಳನ್ನು ಕತ್ತರಿಸಿರುವ ಮರದ ಕೊಂಬೆಗಳನ್ನು ಬೆಸ್ಕಾಂ ರವರಿಗೆ ತೆಗೆಯಲು ತಿಳಿಸಿದರು.

**ಕ್ರಂ.ಸಂ 1ರಿಂದ 2ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೋಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸ.ಕಾ.ಅ./ಸ.ಅ/ಬಿ.ಡಬ್ಲ್ಯೂ.ಎಸ್,ಎಸ್.ಬಿ/ಬೆಸ್ಕಾಂ)**

**ಅರಣ್ಯ ಇಲಾಖೆ:-**

ಪ್ರಸಾದ್ ಕೊಡಿಗೇಹಳ್ಳಿ ಆರ್.ಡಬ್ಲ್ಯೂ.ಎ. ರವರು ವಾರ್ಡ್ ವ್ಯಾಪ್ತಿಯಲ್ಲಿ ಹಳೆ ಮರಗಳು ಹಾಗೂ ಸಾರ್ವಜನಿಕರ ಮನೆಗಳಿಗೆ ತೊಂದರೆಯಾಗುವ ಮರಗಳನ್ನು ತೆಗೆಯಲು ತಿಳಿಸಿದರು.

**ಪರಿಶೀಲಿಸಿ ಒಂದುವಾರದೋಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:-ಅರಣ್ಯ ಇಲಾಖೆ/ಬಿಬಿಎಂಪಿ)**

**Animal Husbandry:-**

- ವಾರ್ಡ್ ವ್ಯಾಪ್ತಿಯ ಕೊಡಿಗೇಹಳ್ಳಿ, ಬೆಳತ್ತೂರು ಮತ್ತು ಅಯ್ಯಪ್ಪನಗರ ಈ ಪ್ರದೇಶಗಳಲ್ಲಿ ಹಂದಿಗಳು ಹಾಗೂ ನಾಯಿಗಳ ಕಾಟ ಹೆಚ್ಚಾಗಿದ್ದು ಸಾರ್ವಜನಿಕರಿಂದ ಅತಿಯಾದ ದೂರುಗಳು ಬಂದಿರುತ್ತದೆ ಎಂದು ತಿಳಿಸಿದರು.

(ಕ್ರಮ:-Animal Husbandry/ಬಿಬಿಎಂಪಿ)

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

ಮುಂಜಾಗ್ರತಾ ಕ್ರಮವಾಗಿ ಸಭೆ ಸಮಾರಂಬ ಮಾಡದಂತೆ ತಿಳಿಸಲಾಯಿತ್ತು ಹಾಗೂ ವ್ಯಾಕ್ಸಿನ್‌ನೇಶನ್ ಹಾಕಿಸಲು ಸ್ಥಳಿಯರಿಗೆ ಮುಂಜಾಗ್ರತೆ ವಹಿಸಿ ಕ್ರಮಕೈಗೊಳ್ಳಲು ತಿಳಿಸಿದರು.

Covid-19, ವ್ಯಾಕ್ಸಿನೇಷನ್, Contact Tracing ಮತ್ತು Testing ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು. ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ನೋಡಲ್ ಅಧಿಕಾರಿ ಹಾಗೂ
ಸ.ಕಾ.ಅ. ಹೂಡಿ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಹದೇವಪುರ ವಲಯ

ವಾರ್ಡ್ ಸಮಿತಿ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-54 ಹೂಡಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಹದೇವಪುರ ವಲಯ